ಮ್ಯಾಲ ಕುಂತು ಸಿಗರೇಟು ಸೇದುತ್ತಿದ್ದ ಇಬ್ರಾಹಿಂ ಸಾಬಿ ಇದೆಲ್ಲದರ ಮಜಾ ತಗೋತ ಮೂಗಿನಾಗೇ ನಗುತ್ತಿದ್ದ.

ಮತ್ತೊಬ್ಬ ಗುಮಾಸ್ತನಂಗಿದ್ದ ಆಸಾಮಿ ನಿಂತು ನೋಟುಬುಕ್ಕಿನ್ಯಾಗ ಆ ಹಳ್ಳಿ ಮಂದಿಯ ಹೆಸರು, ಊರು, ಪತ್ತಾ, ಠಿಕಾಣಾಯೆಲ್ಲಾ ಬರ್ಕೊತಿದ್ದ. ಇದೆಲ್ಲಾ ಮುಗೆಟಗೆ ಸಂಜೆ ಸತ್ತು ಕತ್ತಲಾಗಿ ಬಯಲಿನ ಬಾಜುವಿದ್ದ ರಸ್ತಾದ ಕಂಬಗಳ ನೆತ್ತಿ ಮ್ಯಾಲಿದ್ದ ಟ್ಯೂಬ್ ಲೈಟುಗಳು ಭೆಳ್ಳಗs ಬೆಳಕು ಕಾರಿಕೊಂಡುವು.

ಎರಡೂ ಲಾರಿಗೋಳದಾಗ ಮಂದಿ ತಮ್ಮ ತಮ್ಮ ಗಂಟು, ಗದಡಿ, ಮಕ್ಕಳು ಮರಿ ಅಂತ ಕಿಕ್ಕಿರಿದು ತುಂಬಿದರು. ಕುರಿಗಳ ಹಿಂಡಿನಂಗ ಎಲ್ಲೋರಿಗಿ ಒತ್ತಿ ಒತ್ತಿ' ಅಂದರ ಚಲೋ ಉಧರ ಹಟೋ... ಏ ಹಿರ್‍ಯಾ ಕಾಲು ಮಡಚ್ಕೊಂಡು ಕೂಡು... ಏ ಯವ್ವಾ... ನಿನ್ ಕೂಸಿಗಿ ತೊಡಿಮ್ಯಾಲ ತಗೋ...' ಅನ್ನುತ್ತ ಒಳಗೆ ತಳ್ಳಿದರು ಡರೆವರ ಮತ್ತು ಕಿನ್ನರಗೋಳು. 'ಅದರಲ್ಲೊಬ್ಬಾಕಿ ಗಟವಾಣಿ ಹೆಂಗಸು ಸಟಕ್ಕನೆ ಸಿಡಿದಳು. 'ಕೂಸಿಗ್ಯಾಕೆ ತೊಡಿಮ್ಯಾಲ ತಗೋಬೇಕಪಾ... ಅವುಕ್ಕನೂ ನಿಮ್ಮ ಸಾಬ ಪೂರಾ ತಿಕೀಟಿನ ರೊಕ್ಕಾ ಸಂಬೋರು ರುಪೈ ತಗೊಂಡಾನಲ್ಲ...' 'ಏ ಚುಪ್... ತೆಳಗ ಇಳ್ಳಿ ಬಿಡ್ಲೇನು ನಿನಗ... ನಡಿ. ಬೇಕಾರ ಬಹೆಸ್ ಮಾಡಿದ್ರ ಇಲ್ಲೇ ಬಿಟ್ಟು ಹೋಗ್ತಿನಿ ನಿನಗಾ...' ಅಂತ ಬೈದನು. ಅಕಿನ ಗಂಡ 'ಏ ಸುಮ್ಮನಿರೇ ಭೋಸುಡೀ...' ಅಂತ ಬೈದು ಡರೆವರನಿಗೆ 'ತಪ್ಪಾಯ್ತ್ರೀ ಬಾಬಾ... ಹಳ್ಳಿ ಗಂವಾರ ಅನಪಡ ಹೆಂಗಸದಾ... ಅದಕ್ಕ ತಿಳೀಲಿಲ್ಲರೀ... ಮಾಫ್ ಮಾಡ್ರಿ...' ಅತಂದು ಕೈ ಜೋಡಿಸಿದನು. 'ಇಂವಾ ನೋಡು... ಹೆಣ್ತೆಗಿ ಅನಫಡಂತ ಅಂತಾನ... ತಾನೇನು ಭಾಳ ಸಾಲಿ ಕಲ್ತು ಓದಿ ಬರ್‍ದವನಂಗ...' ಅಂತಂದು ಆ ಗುಂಪಿನಲ್ಲೊಬ್ಬ ಕಿಸಕ್ಕನೆ ನಕ್ಕದ್ದು ಯಾರೂ ಗಮನಿಸಲಿಲ್ಲ.

ತಾಸೊತ್ತಿನ ಮ್ಯಾಲೆ ಲಾರಿಗಳು ಆವಾಜು ಮಾಡುತ್ತ ಚಾಲೂ ಆಗಿ ಮುಂದೆ ನಡೆದು ರಸ್ತೆಗಿಳಿದು ವೇಗ ಜಾಸ್ತಿ ಮಾಡಿಕೊಂಡು ಓಡತೊಡಗಿದುವು.

## ಬಂಬೈ ತಲುಪಿದ ಲಾರಿ

ರಾತರೆಲ್ಲ ನಡ್ಡು ಬೆಳಕು ಹರಿಯುವ ವ್ಯಾಳ್ಯಾದಾಗ ಲಾರಿಗೋಳು ಬಂಬೈ ತಲುಪಿದುವು. ಹಾಂಗ ಎಲ್ಲೋರಿಗಿ ಬಂಬೈ ಶಾರದಾಗೇನೂ ದಗದಾಯಿರ್‍ಲಿಲ್ಲ. ಆಸುಪಾಸಿನ ಹತ್ತು ಹದಿನೆಂಟು ಹರದಾರಿ ದೂರದ ಬಿಲ್ಡಿಂಗು ಕಟ್ಟುವಲ್ಲೋ, ಇಟ್ಟಂಗಿ ಭಟ್ಟಿಯಾಗೋ, ಹೊಲ ತ್ವಾಟದಾಗೋ ಅಂತ ಬ್ಯಾರೆ ಬ್ಯಾರೆ ಕಡಿಗಿ ಕೆಲ್ಸಾಯಿದ್ದುವು. ಲಾರಿಗೋಳು ಮುಂದೆ ಹೋಗಿ ಅಲ್ಲಲ್ಲಿ ಒಂದೀಸು ಮಂದಿಗಿಳಿಸುತ್ತ ಮುಂದೆ ನಡೆದರು. ಹಿಂಗಾಗಿ ಕಲಬುರ್ಗಿಯಿಂದ ಬಂದ ಮಂದಿ ಯೆಲ್ಲೋರೂ ಒಂದೇ ಜಾಗದಾಗ ಕೆಲಸ ಸಿಗಲಾರ್‍ದಂಗಾಗಿ ಬ್ಯಾರೆ ಬ್ಯಾರೆ ಕಡಿ ಚದುರಿ ಹ್ವಾದರು.

ಹಿಂಗೆ ಗುಳೆಯೆದ್ದು ದಲಾಲನ ಮುಖಾಂತರ, ಲಾರಿ ಸವಾರಿಯಲ್ಲಿ ಕುಂತು ಸಣ್ಣ ಚಿಂಚೂರಿನಂಥ ಚಿಕ್ಕ ಹಳ್ಳಿಯಿಂದ ಸಿರಿಮಂತನ ಕುಟುಂಬ ಬಂಬೈಗೆ ಹತ್ತು ಹರದಾರಿಯ ದೂರದಲ್ಲಿದ್ದ ಗಡಗಾಂವ ಅನ್ನೊ ಹೆಸರಿನ ಕಾಡಿನ ಅಂಚಿನಲ್ಲಿ ಬಂದಿಳಿದಿತ್ತು, ಕಲಬುರ್ಗಿ ಜಿಲ್ಲಾದಿಂದ ಬಂದಿದ್ದ ನಾಕು ಕುಟುಂಬಗೋಳಿಗಿ ಆಟೇ ಇಲ್ಲಿ ಬಿಡ್ಲಿಂಗಿನ ಕೆಲಸ ಸಿಕ್ಕಿತು. ಈ ನಾಕೂ ಕುಟುಂಬದವರನ್ನು ಇಳಿಸಿ ಕಿನ್ನರ ಬಂದು ಅವರಿಗೆ ಕೆಲಸದ ಮೇಲುಸ್ತುವಾರಿ ನೋಡ್ಕೋತಿದ್ದ ಮೇಸ್ತ್ರಿ ಬಾಬುರಾವ್‌ನಿಗೆ ಒಪ್ಪಿಸಿ ಮುಂದಿನೂರಿಗೆ ಲಾರಿ ಚಲಾಯಿಸಿದರು.

ಇವರು ಕೆಲಸ ಮಾಡುವ ಸಣ್ಣದೊಂದೂರಿನಂಥ ಜಾಗ ಇರೋದು ಬಂಬೈ ಸಮೀಪದ, ಸಮೀಪ ಅಂದ್ರೆ ದಸ್ ಬಾರಾ ಹರದಾರಿಯ ದೂರದ ಕಾಡಿನ ಕಿನಾರೆಯಲ್ಲಿ. ಅದೊಂದು ಸಣ್ಣ ಕೇರಿಯಂತೇ ಆಗಿದ್ದು ಅದಕ್ಕೆ 'ಪಟ್ಟಣ' ಅಂತ ಹೆಸರಿಟ್ಟಿದ್ದರು. ಈ ಪಟ್ಟಣದಿಂದ ಗಡಗಾಂವ ಕ್ರಾಸ್ ಇರೋದು ಹರದಾರಿಯ ದೂರದಲ್ಲಿ. ಗಡಗಾಂವ ಕ್ರಾಸ್ ಅನ್ನೋದು ಒಂದು ಚೌಕಿನ ಹೆಸರು. ಒಂದಕ್ಕೊಂದು ತೆಕ್ಕೆ ಬಡ್ಕೊಂಡು ನಿಂತ ನಾಕು ಕಚ್ಚಾ ರಸ್ತಾಗೋಳ ನಡುವಿನ ಜಾಗದಲ್ಲೊಂದು ಈಟು ದಪ್ಪ ಆಟು ಎತ್ತರದ ದೆವ್ವಿನಂಥ ಆಲದ ಮರ. ಅದರ ಟೊಂಗೆಗಳೆಲ್ಲಾ ಕೆಳಗೆ ಜೋತುಬಿದ್ದು ನೆಲಕ್ಕೆ ಮಾರಿಯಿಟ್ಟು ನಿಂತಿದ್ದರಿಂದಾಗಿ ಅವೆಲ್ಲ ಮರಕ್ಕೆ ಆಸರೆ ಕೊಟ್ಟು ನಿಂತಿದ್ದ ಕಂಬಗೋಳಂಗೇ ಕಾಣುತ್ತಿದ್ದುವು. ಕೆಲವು ಜೋತಾಡುವ ಎಳೆ ಟೊಂಗೆಗಳು. ನೆಲದೊಳಗರ್ಧ ಹೂತು ಮೇಲರ್ಧ ಎದ್ದು ನಿಂತ ಮರದ ಕಾಂಡಗಳೋ ಬೇರುಗಳೋ ತಿಳಿಲಾರ್‍ದಂಥ ತೊಲೆಗಳಂಥವು. ನಾಕೆಂಟು ಮಂದಿ ಆರಾಮಾಗಿ ಅವುಗೋಳ ಮ್ಯಾಲೆ ಪೊಗದಸ್ತಾಗಿ ಕುಂಡಿಯೂರಿ ಕುಂತು ಬೀಡಿ ಸೇದುತ್ತ ಹರಟೆ ಹೊಡ್ಯೋದಕ್ಕ ಲಾಯಕ್ಕಾದವುಗಳು. ಆದರೆ ಯಾರೂ ಅಲ್ಲಿ ಬಂದು ಕೂಡುತ್ತಿರಲಿಲ್ಲ. ಮಡಗಾಂವ ಚೌಕಿನ ಆಚೆ ಬದಿಗೊಂದು ಹಳೆಯ ಕಾಡುಮರವೊಂದನ್ನು ನಡುವೆ ಮಾಡಿಕೊಂಡು ಗೋಲಾಕಾರದಲ್ಲಿ ಸುತ್ತಲೂ ಕಟ್ಟಿದ್ದ, ಎಂದೋ, ಯಾವ ರಾಯನ ಕಾಲದ್ದೋ ಗುಂಡಗಿನ ಕಟ್ಟೆಯಿದ್ದು ಅದರ ಮ್ಯಾಲೆ ಕರಿಕಲ್ಲಿನ ಹಾಸಿಗೆಯಿತ್ತು ಖರೇ. ಅದೂ ಅಲ್ಲೀಟು ಇಲ್ಲೀಟು ಕುಸಿದು ಬಿದ್ದು ಹಲ್ಲು ಬಿದ್ದ ಬಕ್ಕಬಾಯಿ ಹಂಗ ಕಾಣುತ್ತಿತ್ತು. ಅದು ರವುಂಡಾಗಿದ್ದದ್ದರಿಂದಲೋ ಏನೋ ಅದಕ್ಕೆ ಅಲ್ಲಿಯ ಮಂದಿ 'ಚಕ್ಕರ ಕಟ್ಟಾ' ಅಂತ ಕರೀತಿದ್ರು. ಅದರ ಮಗ್ಗುಲಲ್ಲೇ ಮರಗಳಿಗೊತ್ತಿಕೊಂಡು ನಿಂತಿತ್ತು ಸೋನು ಬಾಯಿಯ ಚಾ ದುಕಾನು. ದುಕಾನೆಂದರೆ ಅದೇನು ಕಲ್ಲಿನಿಂದ ಕಟ್ಟಿ ಛತ್ತು ಹಾಕಿದ್ದ ದುಕಾನಲ್ಲ. ತಾಡಿನ ಪೊರಕೆಯ ಹೊದ್ದಿಕೆಯ, ಸಿಂದಿ ಬಚ್ಚಿನ ಆಸರೆ ಕೊಟ್ಟು ಕಟ್ಟಿದ್ದ ಗುಡಿಸಲು. ಅದರಲ್ಲೊಂದು ಒಲೆ ಹೂಡಿ, ಚಾಪುಡಿ, ಸಕ್ಕರೆ, ಹಾಲು ತಂದಿಟ್ಟುಕ್ಕೊಂಡು ಚಾದ ತಲುಬಿದ್ದವರು ಬಂದು ಆಡರ್ ಮಾಡಿದ್ರೆ ಸಿಲಾವರ ಬಗೋಣಿಯಲ್ಲಿ ಚಾ ಕಾಸಿ, ಬಟ್ಟೆಯಿಂದ ಸೋಸಿ ಕಾಜಿನ ಸಿಂಗಲ್ ಗಿಲಾಸಿಗೆ ಹಾಕಿ ಕುಡ್ಸಿದ್ದಳು. ಅವಳದು ಹೆಸರಿಗಾಟೇ ಚಾ ಹೋಟೆಲ್ಲು. ಅಲ್ಲಲ್ಲ ಚಾ ದುಕಾನು. ಆದರ ಅದು ದಿನದ ಮೂರೂ ಹೊತ್ತು ನೊಣ ಹೊಡೆಯುತ್ತ ಬಿದ್ದಿರುತ್ತದೆ. ದಿನಕ್ಕೆ ನಾಕಾರು ಸರಕಾರಿ ಬಸ್ಸು, ಹತ್ತೆಂಟು ಲಾರಿಗೋಳು ಆ ಕ್ರಾಸಿನಲ್ಲಿ ಬಂದು ನಿಂತು ಒಂದೀಟು ದಮ್ಮಾರಿಸ್ಕೊಂಡು ಹೋಗಬೇಕಾದ ಹಳ್ಳಿಗಳಿಗೆ ಹೋಗುತ್ತಿರುತ್ತವೆ. ಗಾಡಿಗಳ ಡರೆವರುಗೋಳೋ, ಕಿನ್ನರುಗೋಳೋ, ಬಸ್ಸಿನ್ಯಾಗಿನ ನಾಕಾರು ಗಿರಾಕಿಗೋಳೋ ಆವಾಗವಾಗ ಬಂದು ಆ ತಾಡಿನ ಪೊರಕೆಯ ಚಾ ದುಕಾನಿನಲ್ಲಿ ತಲಾಗೊಂದೊಂದು ಸಿಂಗಲ್ ಚಾ ಕುಡಿಯೋದುಂಟು. ಅಂತೂ ದಿನವೊಂದಕ್ಕೆ ಒಂದು ಸಣ್ಣ ತಂಬಿಗೆಯೋಟು ಹಾಲು ಖರ್ಚಾಗಿ ಸೋನುಬಾಯಿಗೆ ಏನಿಲ್ಲೆಂದ್ರೂ ದಿನಕ್ಕೆ ಅಕಿನ ಹಾಲು, ಚಾ ಪತ್ತಿ, ಸಕ್ಕರೆಯ ಖರ್ಚೆಲ್ಲಾ ಕಳ್ದು ಐದಾರು ರುಪೈ ಫಾಯದಾ ಆಗೋದಂತೂ ಗ್ಯಾರಂಟಿ.

ಗಡಗಾಂವ ಕ್ರಾಸ್ ಅಂತ ಅಲ್ಲಿಯ ಮಂದಿಗಾಟೇ ಗೊತ್ತು. ಆದರಲ್ಲಿ ಆ ಹೆಸರಿನ ಬೋರ್ಡಾಗಲಿ, ಕೈಮರದ ಪಾಟಿಯಾಗಲಿ ಇಲ್ಲ. ಅದರಿಂದ ಅದ್ದಾ ಹರದಾರಿ ದೂರದಲ್ಲಿ ಸೋನೂಬಾಯಿಯ ಸಣ್ಣ ಹಳ್ಳಿಯಿದೆ. ಅಲ್ಲಿರೋದೂ ಅಕಿದೊಂದು ಗುಡಿಸಲೇ... ಹರೆಯ ಹೊಳ್ಳುವಾಗ ಗಂಡ ಸತ್ತು ಹೋಗಿದ್ದ ಸೋನುಬಾಯಿಗೆ ಹರೆಯದ ಮಗನೊಬ್ಬನಿದ್ದ, ಅವನಿಗಿ ಹೆಣ್ಣು ಹುಡುಕಿ ಮದವಿ ಮಾಡಿದ ಎಡ್ಡಂದ್ರ ಎಡ್ಡೇ ವರ್ಷಿನೊಳಗ ಸೊಸೆ, ಆ ಮಗನನ್ನು ಕರ್‍ಕೊಂಡು ಬಂಬೈಗೆ ಹೋಗಿದ್ದರು. ಅಲ್ಲೇ ಸಂಸಾರ ಹೂಡಿದ್ದರು, ಅದರ ಆ ಮಗರಾಯ ಒಂದೇ ಒಂದು ದಿನವೂ ಅವ್ವನ ಹತ್ತಿರ ಬಂದು ಬದುಕಿದ್ಯಾ ಸತ್ತಿದ್ಯಾ ಅಂತ ಕೇಳಿರಲಿಲ್ಲ! ಸೋನು ಬಾಯಿ ಊರೆಲ್ಲಾ ತಿರುಗ್ಯಾಡಿ ಅತ್ತು ಕರ್‍ದು ಕೊನೆಗೆ ಮಗನ ಆಸೆಯನ್ನೇ ಬಿಟ್ಟಿದ್ದಳು, ಮುಪ್ಪಿಗೆ ತಿರುಗಿದ್ದವಳಿಂದ ಹೊಲ ಗದ್ದೆಯೊಳಗ ಮೈಬಗ್ಗಿಸಿ ದುಡಿಯೋದಕ್ಕ ತಾಕತ್ತಿರಲಿಲ್ಲ ಹಿಂಗಾಗಿ ಯಾರೂ ಅಕಿಗಿ ಕೂಲಿ ಕೆಲಸಕ್ಕ ಕರೀತಿರ್‍ಲಿಲ್ಲ... ಬ್ಯಾರೇನೂ ಬದುಕೋ ದಾರಿ ತಿಳಿಲಾರ್‍ದೆ, ಅಕಿ ಈ ಗಡಗಾಂವ್ ಕ್ರಾಸಿನ್ಯಾಗ ಗುಡಸಿ ಹಾಕ್ಕೊಂಡು ಚಾ ದುಕಾನು ಇಟ್ಟಿದ್ದಾಳೆ.

ಸೋನುಬಾಯಿಯ ಊಟದ ಖರ್ಚು ತೀರ ಕಮ್ಮಿ. ದಿನಾ ಮುಂಜಾನೊಂದು ರೊಟ್ಟಿ ಕಾರಬ್ಯಾಳಿಯಲ್ಲಿ ಮುರಿದು ಹಾಕ್ಕೊಂಡು ತಿಂದು ಮ್ಯಾಲೊಂತುತ್ತು ಅನ್ನ ತಿಂದರೆ ಮುಗೀತು. ಅಕಿನ ಬಾಯಲ್ಲಿಯ ಒಂದು ದವಡೆ ಹಲ್ಲು ಸಡಿಲಾಗಿದ್ದು ಈಕಾಡಿ ಬೀಳಲಾರ್‍ದೆ ಆಕಾಡಿ ಗಟ್ಯಾಗಿ ಕೂಡಲಾರ್‍ದೆ ಅಳಗ್ಯಾಡುತ್ತ, ಉಣ್ಣುವಾಗ ಭಾಳ ಸತಾಯಿಸ್ತಾದ. ಅದಕ್ಕ ರೊಟ್ಟಿ ಬಿಸಿ ಕಾರಬ್ಯಾಳ್ಯಾಗ ಕಲಸ್ಗೊಂಡು ಮೆತ್ತಗಿನ ತುತ್ತು ಮಾಡ್ಕೊಂಡು ಮುಳು ಮುಳು ನುಂಗುತ್ತಾಳೆ. ರಾತ್ರಿಯಂತೂ ಮುಂಜಾನಿ ಉಂಡುಳಿದದ್ದೇ ಒಂದೀಟು ಬಾನ ತಿಂದರಾಯ್ತು. ಅವಳ ಒಂದು ದಿನದ ಖುರಾಕು. ದಿನಕ್ಕೊಂದು ಅಂಗೈ ದಪ್ಪದ ಬಿಸಿ ರೊಟ್ಟಿ, ಸಿಂಗಲ್ ಚಾ ಕೊಡುವ ಗಿಲಾಸಿನೋಸು ಅಕ್ಕಿ ಬಾನ ಆಟೇ.

(ಸಶೇಷ)

**ಆಳ**

ನನ್ನೆದೆಗೆ
ಗಾಳ
ಹಾಕುತ್ತಿರುವ
ನೀನು
ಬಲ್ಲೆಯೇನು
ನನ್ನ ಆಳ?

-ಸಿ.ಪಿ.ಕೆ.

